ದಿನಾಂಕ: 10/12/2008

**ಸಾಲ ನೀಡಿಕೆದಾರರಿಗೆ ನ್ಯಾಯಸಮ್ಮತ ಆಚರಣೆಗಳ ಸಂಹಿತೆ–**
**ಸಂಸ್ಕರಣಾ ಶುಲ್ಕ/ ವೆಚ್ಚಗಳ ಸಂಬಂಧಿಸಿದಂತೆ ಎಲ್ಲ ಮಾಹಿತಿಯನ್ನು**
**ಬಹಿರಂಗಪಡಿಸುವಿಕೆ**

ಆರ್‌ಬಿಐ/ 2008–09/320
ಆರ್‌ಪಿಸಿಡಿ.ಸಿಒ.ಆರ್‌ಆರ್‌ಬಿ.ಬಿಸಿ. ಸಂಖ್ಯೆ. 75/03.05.28–ಬಿ/2008–09

ಡಿಸೆಂಬರ್ 10, 2008

ಎಲ್ಲ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು

ಮಾನ್ಯರೆ

**ಸಾಲ ನೀಡಿಕೆದಾರರಿಗೆ ನ್ಯಾಯಸಮ್ಮತ ಆಚರಣೆಗಳ ಸಂಹಿತೆ–**
**ಸಂಸ್ಕರಣಾ ಶುಲ್ಕ/ ವೆಚ್ಚಗಳ ಸಂಬಂಧಿಸಿದಂತೆ ಎಲ್ಲ ಮಾಹಿತಿಯನ್ನು**
**ಬಹಿರಂಗಪಡಿಸುವಿಕೆ**

ಮೇಲ್ಕಂಡ ವಿಷಯದ ಬಗ್ಗೆ ನಮ್ಮ ದಿನಾಂಕ ಮೆ 16, 2006ರ ಸುತ್ತೋಲೆ ಆರ್‌ಪಿಸಿಡಿ.ಬಿಒಎಸ್/81/13.33.01/2005–06ನ್ನು ದಯವಿಟ್ಟು ಗಮನಿಸಿ. ಇದರಲ್ಲಿ ಕೆಲವು ಸೇವೆಗಳಿಗೆ ಸಂಬಂಧಿಸಿದಂತೆ ಶುಲ್ಕಗಳನ್ನು, ಕಚೇರಿಗಳಲ್ಲಿ/ ಶಾಖೆಗಳಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸೇರಿದಂತೆ ಎಲ್ಲ ವಾಣಿಜ್ಯ ಬ್ಯಾಂಕುಗಳು ಪ್ರದರ್ಶಿಸಬೇಕೆಂದು ಸೂಚಿಸಲಾಗಿತ್ತು.

2. ಕೆಲವು ಬ್ಯಾಂಕುಗಳು ಸಂಸ್ಕರಣಾ ಶುಲ್ಕದ ಜೊತೆಗೆ ಸಾಲಪಡೆಯುವವನಿಗೆ ಆರಂಭದಲ್ಲಿಯೇ ತಿಳಿಯಪಡಿಸದ ಕೆಲವು ನಿಗದಿತ ಶುಲ್ಕಗಳನ್ನು ವಿಧಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಸಾಲಪಡೆಯುವವನಿಗೆ ತಿಳಿಸದೆ, ತರುವಾಯ ಈ ರೀತಿ ಶುಲ್ಕಗಳನ್ನು ವಿಧಿಸುವುದು ನ್ಯಾಯಸಮ್ಮತವಲ್ಲದ ಆಚರಣೆಯಾಗಿರುತ್ತದೆ ಎಂದು ಉಲ್ಲೇಖಿಸಬೇಕಾಗುತ್ತದೆ.

**3. ಆದುದರಿಂದ, ಸಂಸ್ಕರಣೆಗೆ ಸಂಬಂಧಿಸಿದ ಎಲ್ಲ ಶುಲ್ಕ/ ವೆಚ್ಚಗಳನ್ನು ಸಾಲದ ಅರ್ಜಿಯಲ್ಲಿ ತಪ್ಪದೇ ನಮೂದಿಸಿರುವುದನ್ನು ಬ್ಯಾಂಕುಗಳು / ಹಣಕಾಸು ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ಇದಲ್ಲದೆ, ಬ್ಯಾಂಕುಗಳು ಗ್ರಾಹಕನಿಗೆ ವಿವಿಧ ಹಣಕಾಸಿನ ದರಗಳನ್ನು ಇತರೆ ಹಣಕಾಸು ಮೂಲಗಳು ವಿಧಿಸುವ ದರಗಳೊಡನೆ ತುಲನೆಮಾಡಲು ಸಾಧ್ಯವಾಗುವಂತೆ 'ಸಮಗ್ರ ವೆಚ್ಚಗಳು ಸೇರಿದಂತೆ' ಮಾಹಿತಿಯನ್ನು ನೀಡಬೇಕೆಂದು ಸೂಚಿಸಲಾಗಿದೆ.**

ತಮ್ಮ ವಿಶ್ವಾಸಿ

(ಜಿ. ಶ್ರೀನಿವಾಸನ್)
ಮುಖ್ಯ ಮಹಾ ವ್ಯವಸ್ಥಾಪಕರು– ಪ್ರಭಾರಿ